Regd No B G 155

Sri

29—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4



ಸ್ಥಾಪಕರು— ಅಂಮನೆ ಸಿಂಸ್ಕೆದಾಂ ಎಂ ಏ ಸುಬ್ಬರಾಯುರು

[2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ದೊಡ್ಡ ಪಟ್ಟಣಗಳಲ್ಲಾದರೂ ರೇಷನಿಂಗ್ ಆಗತ್ಯ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಎಂಡು ದಿನಗಳ ಅಧಿವೇಶನದ ಸಮಾಪ್ತ ಭಾಷಣವನ್ನು ನಿನ್ನೆ ಪ್ರಧಾನಿ ಶ್ರೀ ಲಾಲ ಬಹಾದ್ದೂರ್ ಶಾಸ್ತ್ರಿಯವರು ಎಾಡಿತ್ತಾ, ಮುಂದಿನ ನಾಲ್ಕು ತಿಂಗಳ ಸಂಧಿಗ್ಧ ಪರಿಸ್ಥಿತಿ ಎದುರಿಸಲು ಆಹಾರ ನಿಯಂತ್ರಣ ಹಾಗೂ ಆಹಾರ ಪಡಿತರ ಕ್ರಮ ಅಗತ್ಯವೆಂದು ನುಡಿದರು,

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಕಡೆಯ ಪಕ್ಷ ದೊಡ್ಡ ಪಟ್ಟಣಗಳಲ್ಲಿ ಆದರೂ ಆಹಾರ ಪಡಿತರ ಜಾರಿಗೆ ತಂದೇಕೆಂದು ನುಡಿದರು.

ಜನರಿಗೆ ಸಾಕಷ್ಟು ಆಹಾರವನ್ನು ಒದಗಿಸುವ ಹೊಣೆಗಾರಿಕೆಯನ್ನು ಪ್ರಸ್ತಾಪಿಸಿ, ರೇಷನಿಂಗ್ ಅಗತ್ಯವೆಂದು ನುಡಿದರು

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ನಾಲ್ಕನೆಯ ಯೋಜನೆಯ ಧ್ಯೇಯೋದ್ದೇಶಗಳನ್ನು ಅಂಗೀಕರಿಸಿತು.

ಆಹಾರೋತ್ಪನ್ನ ಹೆಚ್ಚಿಸಲು ಗೊಬ್ಬರಗಳನ್ನು ಅಮದು ಮಾಡಿಕೊಳ್ಳಬೇಕೆಂದಾಗಿ ಪ್ರಧಾನಿಗಳು ತಿಳಿಸಿದರು.

ಅಕ್ರಮ ದಾಸ್ತಾನುಗಾರರು ಹಾಗು ಲಾಭಕೋರರ ಮೇಲೆ ಕ್ರಮ ತೆಗೆದು ಕೊಳ್ಳಬೇಕೆಂದು ತಿಳಿಸಿದರು.

ನೆಹರು ಸ್ಮಾರಕ ಪಂದ್ಯ

ನೆಹರೂ ಸ್ಮಾರಕ ಅಖಿಲ ಭಾರತ ಹಾಕಿ ಪಂದ್ಯ ಡಿಸೆಂಬರು 12 ನೆಯ ದಿನಾಂಕ ದೆಹಲಿಯಲ್ಲಿ ನಡೆಯುವುದು. ಉತ್ಪತ್ತಿಯ ಹಣದಲ್ಲಿ ನೆಹರು ಸ್ಮಾರಕ ನಿಧಿಗೆ ಭಾಗ ಕೊಡಲಾಗುವುದು.

★

ಆಲಿಘಡ ಹಾಗೂ ಲಕ್ನೋ ವಿಶ್ವ ವಿದ್ಯಾನಿಲಯಗಳಿಗೆ ಅನುಕ್ರಮವಾಗಿ 6

ಈಜುವ ದಾಖಲೆ

ಮಹಾರಾಷ್ಟ್ರದ ಯುವಕ ಈಜುಗಾರ ಶ್ರೀ ಶುಕ್ಲಾಂಬರವರು ಈಜುವುದರಲ್ಲಿ ದಾಖಲೆ ಸ್ಥಾಪಿಸಿದ್ದಾರೆ ಅವರು 13 ಗಂಟೆ ನಾಲ್ಕು ನಿಮಿಷಗಳಲ್ಲಿ 32 ಮೈಲುಗಳು ಈಜಿದರು.

★

ವೈಭವದ ಸ್ವಾಗತ

ಟೋಕಿಯೋ ಒಲಂಪಿಕ್ಸಿನಲ್ಲಿ ಹಾಕಿ ಪಂದ್ಯದಲ್ಲಿ ವಿಜಯ ಗಳಿಸಿದ ಭಾರತದ ಹಾಕಿ ತಂಡ ಈ ದಿನ ದೆಹಲಿಯ ಪಲಂ ವಿಮಾನ ನಿಲ್ದಾಣದಲ್ಲಿ ವೈಭವದ ಸ್ವಾಗತವೀಯಲಾಗುವದು

★

ಮಾತುಕತೆ

ಸಿಂಹಳ ಭಾರತೀಯರ ಬಗ್ಗೆ ಪ್ರಧಾನಿ ಶಾಸ್ತ್ರಿಯವರು ಹಾಗೂ ಪ್ರಧಾನಿ ಬಂಡಾರನಾಯಕೆಯವರು ನಿನ್ನೆ ನವ ದೆಹಲಿಯಲ್ಲಿ ಎಂಡು ಗಂಟೆಗಳ ವರಿಗೆ ಮಾತುಕತೆ ನಡೆಸಿದರು

★

ರಷ್ಯ ಪ್ರಧಾನಿ ಎ ಕೊಯ್ಗಿನ್ ರವರು ಅಧ್ಯಕ್ಷ ಜಾನ್ಸನ್ರಿಗೆ ಪತ್ರ ಬರೆದಿರುವರು

★

ಎಂಡು ದಿನಗಳ ಭೇಟಿಗಾಗಿ ಭಾರತ ಅಧ್ಯಕ್ಷರಾದ ಡಾ॥ ರಾಧಾಕೃಷ್ಣನರು ಈ ದಿನ ಮದ್ರಾಸಿಗೆ ಬರುವರು

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ

ಅಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ ಸಂದಕೃಷ್ಣ ಜೋಯಿಸರವರಿಂದ

30 ಶುಕ್ರವಾರ ದಶಮಿ ಮಃ

ಕಮ್ಯೂನಿಸ್ಟರಿಂದ ಪರಿಶೀಲನೆ

ವೈಸೂರು ಪೌರಸಭಾ ಕಮ್ಯೂನಿಸ್ಟರು 26 ನೆಯ ತಾ॥ ಪೌರಸಭಾ ವಿಭಾಗಾಧಿಕಾರಿಗಳವರೊಡನೆ ವಂಡಿ ಹಾಗೂ ಲಷ್ಕರ ಮೊಹಲ್ಲಾ ಪರಿಶೀಲನೆ ಮಾಡಿದರು ಗಾಳಿ ಬೆಳಕು ಸಾಲದ ಕಟ್ಟಡಗಳಲ್ಲಿ ಇರುವ ಕಾಫಿ ಬಾರುಗಳನ್ನು ಅನಿರೀಕ್ಷಿತವಾಗಿ ಅವರು ಪರಿಶೀಲಿಸಿದರು ಅವು ತುಂಬಾ ಗಲೀಜಾಗಿದ್ದವು. ಅವರನ್ನು ಪ್ರಾಸಿಕ್ಯೂಟು ಮಾಡಲು ಅರೋಗ್ಯಾಧಿಕಾರಿಗಳಿಗೆ ಸೂಚಿಸಿದರು ವಂಡಿ ಮತ್ತು ಲಷ್ಕರ ಪ್ರದೇಶದ ಕೆಲವು ಮಾಂಸದ ಅಂಗಡಿಗಳು ದೂಳು ಹಾಗೂ ಕಚಡಕ್ಕೆ ಅವಕಾಶ ಇರುವದನ್ನು ಅವರು ನೋಡಿ ಪ್ರಾಸಿಕ್ಯೂಟು ಮಾಡುವಂತೆ ಅವರು ತಿಳಿಸಿದರು ಅಗತ್ಯದಾಗಳನ್ನು ಕೊಡದೆ ಗೊಬ್ಬರ ತುಂಬುತ್ತಿದ್ದ ಕೆಲವು ಗಾಡಿಯವರನ್ನು ಹಿಡಿದು ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಯಿತು.

★

ಧನ್ವಂತರಿ ಜಯಂತಿ

ನವೆಂಬರು 1 ನೇ ತಾ॥ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯ ಸಭಾಂಗಣದಲ್ಲಿ ಶ್ರೀ ಧನ್ವಂತರಿ ಜಯಂತೀ ಸಮಾರಂಭವನ್ನು ಮೈಸೂರು ಆಯುರ್ವೇದ ವೈದ್ಯ ಸಂಘದ ಆಶ್ರಯದಲ್ಲಿ ನಡೆಸಲೇರ್ಪಡಿಸಲಾಗಿದೆ, ಡಾ॥ ಎ ಎಸ್ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು ಎಂದು ಗೌರವ ಕಾರ್ಯದರ್ಶಿ ಗೋಪಾಲಕೃಷ್ಣಾವಧಾನೀಯವರು ತಿಳಿಸುತ್ತಾರೆ.

———

ಗುಲ್ಬರ್ಗಾದಲ್ಲಿ 1 ತಿಂಗಳಿಂದ ಬಂದಾಗಿದ್ದ ರೊಟ್ಟಿ ಅಂಗಡಿ ಆರಂಭವಾಗುತ್ತಿವೆ.

ವಿವಿಧ ವಿಷಯಗಳು

ಮೊನ್ನೆ ಒಬ್ಬ ಯುವಕನು ಶ್ರೀ ಜೆ ಕೆ ರಾಮಸ್ವಾಮಿ ಎಂಬವರ ಮನೆಗೆ ತೆರಳಿ ತನಗೆ ಸಹಕಾರ ಸಂಘದ ಅಡಳಿತಗಾರರು ಗೊತ್ತಿರುವರೆಂದೂ ಅವರಿಗೆ 25 ಕಿಲೋ ಗೋಧಿ ತಂದುಕೊಡುವದಾಗಿ ಹೇಳಿ ರೂ 25 ಮತ್ತು ಬೈಸಿಕಲ್ ತೆಗೆದುಕೊಂಡು ಹೋದವನು ಪತ್ತೆ ಇಲ್ಲವಾಗಿದೆ

ಮಹಾರಾಷ್ಟ್ರ ಆಹಾರಧಾನ್ಯ ಲೈಸನ್ಸು ಅಜ್ಞೆಯನ್ನು ಭಂಗಮಾಡಲು ಪಿತೂರಿಯಲ್ಲಿ ಭಾಗವಹಿಸಿದ ಅವಾದನೆಗೆ ಲಾ ಕಾಲೇಜ ಪ್ರೊಫೆಸರರು ಫಿರೋಜ ಜಂಷೆಜ್ ವಾಕ್ಫ್ ಬಂಧಿತರಾದರೆಂದು ಜಾಮೀನು ಮೇಲೆ ಬಿಡುಗಡೆ ಆದರೆಂದೂ ಬೊಂಬಾಯಿ ವಾರ್ತೆ

ಅನಂತಪುರದಲ್ಲಿ ಅಕ್ಕಿ ಕಿಲೋಗೆ 85 ಪೈಸೆ ಚಿಲ್ಲರೆ ವಾರಾಟವಾಗುತ್ತಿರುವ ಒಕ್ಕಿರಂಗ ಮಾರುಕಟ್ಟೆ ಸ್ಥಳಕ್ಕೆ ಜನರ ನೂಕುನುಗ್ಗಲು ಹೆಚ್ಚಾಗಿ ಅನೇಕ ಮಹಿಳೆಯರು ಮಕ್ಕಳು ಗಾಯಗೊಂಡರು

ರೇಷನಿಂಗಿಗೆ ತಮ್ಮ ವಾರ್ಟ್ ಪೂರ್ಣ ವಿರೋಧವೆಂದು ಅಖಿಲ ಭಾರತ ಜನ ಸಂಘದ ಕಾರ್ಯದರ್ಶಿ ಶ್ರೀ ಸಿಂದಸಿಂಗ ಭಾಂಡಾರಿ ಶಿವಮೊಗ್ಗದಲ್ಲಿ ತಿಳಿಸಿದರು

ಅಹಮದಾಬಾದು— ಬರುವ ಆಗಸ್ಟು 15 ರೊಳಗೆ ಜಯು, ಡಮಕ್, ನಗರ ಹವೇಲಿಯನ್ನು ಗುಜರಾತಿಗೆ ಸೇರ್ಪಡೆ ಮಾಡದಿದ್ದರೆ, ರಾಜ್ಯಾಂತ ಜನತೆ ಕೂಡಲು ಕಮ್ಯೂನಿಸ್ಟ್ ವಾಮಪಕ್ಷದವರು ಬೆದರಿಕೆ ಹಾಕಿರುವರು.

ಎರ್ನಾಕುಲಂ— ಕೊಚ್ಚಿ ರೇವಿನ ರೈಲ್ವೇ ಸ್ಟೇಷನ್ನಿಗೆ ಕಪ್ಪೆ ಶಂಬೆದ ಸಾರ್ಸಲು ಬಂದು ಕಪ್ಪೆಗಳು ಈಜಿಗೆ ಬಂದು ಕುಪ್ಪುಶ್ಯಾ ಹುಂಡಿ, ಹಿಡಿಯಲು ಸ್ಟೇಷನ್ನಿನವರಿಗೆ ತುಂಬಾ ತೊಂದರೆಯಾಯಿತು : ಅಷ್ಟರಲ್ಲಿ ಪಾರ್ಸಲಿನವರು ಬಂದು ತೆಗೆದುಕೊಂಡುಹೋದರು.

ಶ್ರೀ ಧನ್ವಂತರಿ ಜಯಂತಿ

(ಮುಂದುವರಿದುದು)

ಆಯುರ್ವೇದವು ಒಂದು ಪರಿಪೂರ್ಣವಾದ ಶಾಸ್ತ್ರ ; ಅದನ್ನು ಪೂರ್ಣವಾಗಿ ಅಭ್ಯಾಸಮಾಡಿ ಆಚರಣೆಗೆ ತಂದೇ ಕಾದರೆ ಜೀವಮಾನದಪೂರ್ತಿ ಸಾಕಾಗುತ್ತದೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ: ರೋಗನಿದಾನ, ಔಷಧ ತಯಾರಿಕೆ ಚಿಕಿತ್ಸಾಕ್ರಮ ಮುಂತಾದ ದೃತಿಯೆಂದು ವಿಜ್ಞಾನದಲ್ಲೂ ಅಲೋಪತಿವೈದ್ಯಕ್ಕಿಂತ ಭಿನ್ನರೀತಿಯಾಗಿದೆ : ಒಬ್ಬನೇ ಮನುಷ್ಯನು ಎರಡು ರೀತಿಯ ಚಿಕಿತ್ಸೆಯನ್ನೂ ಕಲಿತು ಚಿಕಿತ್ಸೆ ನಡೆಸಹೋಟರೆ, ಆಯುರ್ವೇದ ಬಿಟ್ಟುಹೋಗಿ ಅಲೋಪತಿ ಮಾತ್ರ ಅವನಲ್ಲಿ ಉಳಿಯುತ್ತದೆ ; ಇದರಿಂದ ಆಯುರ್ವೇದಕ್ಕಿಂತ ಅಲೋಪತಿ ವೈದ್ಯವು ಶ್ರೇಷ್ಠವೆಂದಾಗುವುದಿಲ್ಲ : ಆದರೆ ಅಲೋಪತಿ ವೈದ್ಯಕ್ಕೆ ಹಣ ಕೊಡುವ ಹಾಗೆ ಆಯುರ್ವೇದಕ್ಕೆ ಹಣ ಕೊಡುವುದಿಲ್ಲ : ಇಂದು ಕೆಲವು ಅಲೋಪತಿ ವೈದ್ಯರು ಸುಲಿಗೆಯೋಪಾದಿಯಲ್ಲಿ ಜನರಿಂದ ಹಣಪಡೆಯುತ್ತಿರುವುದನ್ನು ಎಲ್ಲೆಲ್ಲೂ ಕಾಣಬಹುದು

ಪಂಮಾತ್ಮನು ಪ್ರಜೆಗಳಿಗೆ ಸ್ವಸ್ಥಚಿತ್ತತೆ ಉಂಟಾಗಲು ಆಯುರ್ವೇದ ಶಾಸ್ತ್ರವನ್ನು ಉಪದೇಶ ಮಾಡಿದ್ದಾನೆ ; ಈ ಶಾಸ್ತ್ರವನ್ನು ಭರತಖಂಡದಲ್ಲಿ ಪುನರುಜ್ಜೀವನಗೊಳಿಸಬೇಕೆಂದು ಕೆಲವು ಜನರು ಪ್ರಯತ್ನಮಾಡುತ್ತಿದ್ದಾರೆ ಪ್ರತಿಯೊಬ್ಬರೂ ಆಯುರ್ವೇದ ಅಭಿಮಾನಿಯೂ ಆವರಿಗೆ ಬೆಂಬಲ ನೀಡಬೇಕು ; ಅಖಿಲ ಭಾರತ ಆಯುರ್ವೇದ ಮಂಡಲ ಮತ್ತು ಅಖಿಲ ಕರ್ನಾಟಕ ಆಯುರ್ವೇದ ಮಂಡಲದ ಸನ್ಮೇಳನಗಳು ಪ್ರತಿವರ್ಷವೂ ನಡೆಯುವಂತಾಗಬೇಕು ; ಆ ದಿ ಶಾಖೆಗಳು ಪ್ರತಿಯೊಂದು ಜಿಲ್ಲೆಯಲ್ಲೂ ಸ್ಥಾಪಿಸಲ್ಪಟ್ಟು ಪ್ರಚಾರಕಾರ್ಯವನ್ನು ಮಾಡುವಂತಾಗಬೇಕು ; ಆಯುರ್ವೇದ ಪ್ರಚಾರಕ್ಕಾಗಿಯೇ ವಿಶಾಸಲಾಗಿರುವ ' ಧನ್ವಂತರಿ ' ' ಆಯುರ್ವೇದ ' ಮುಂತಾದ ಪತ್ರಿಕೆಗಳಿಗೆ ಎಲ್ಲಾ ಕಡೆಯೂ ಚಂದಾದಾರರು ಹೆಚ್ಚಾಗುವಂತೆ ಮಾಡಬೇಕು ; ಆಯುರ್ವೇದ ವೈದ್ಯರು ಒಬ್ಬರಿಗೊಬ್ಬರು ಸಹಕರಿಸಿಕೊಂಡು ಸಂಘಟಿತರಾಗಿ ಪ್ರಾಚೀನ ವೈದ್ಯಶಾಸ್ತ್ರದ ಅಭಿವೃದ್ಧಿಗೆ ಶ್ರಮಿಸಲು ಪಣತೊಡಬೇಕು.

ದಿನಾಂಕ 1-11-64 ನೇ ಆಶ್ವಯುಜ ಬಹುಳ ದ್ವಾದಶಿ ಶ್ರೀ ಹರಿಯು ಶ್ರೀ ಧನ್ವಂತರಿ ಅವತಾರ ಮಾಡಿದ ಪವಿತ್ರ ದಿನ; ಅಂದು ಪ್ರತಿಯೊಬ್ಬರೂ ತಮ್ಮ ಕಾರ್ಯ ಯಶಸ್ವಿಯಾಗಲು ಶ್ರೀ ಧನ್ವಂತರಿಯನ್ನು ಪೂಜಿಸಿ ಪ್ರತಿಜ್ಞೆಯನ್ನು ಕೈಕೊಂಡು ಕಾರ್ಯತತ್ಪರರಾಗೋಣ : ಶ್ರೀ ಧನ್ವಂತರಿಯು ನಮ್ಮಲ್ಲಿ ಕೃಪೆಯಿಟ್ಟು ಆಯುರ್ವೇದವು ಎಲ್ಲಾ ಕಡೆಯೂ ಪ್ರಚಾರವಾಗುಂತೆ ಮಾಡಲಿ.

ಆನಂತನರಸಿಂಹಯ್ಯಂಗಾರ್
ಶಾಸ್ತ್ರಧರ್ಮಪ್ರಚಾರ ಸಭಾ (ಶಾಖೆ)
ಹೊಂಗನೂರು, ಮೈಸೂರು ಜಿಲ್ಲೆ

ಪೆಸರಾ ಮನೋರಂಜನೆ, ಸಾಂಸ್ಕೃತಿಕ ಕಾರ್ಯಕ್ರಮ- ಎಗ್ಮಿಬಿಷನ್ನಿನಲ್ಲಿ
ತಾ|| 30 ರಂದು ಸಂಜೆ 6 ರಿಂದ ಪ್ರಾರಂಭ. ನಾಟಕ

= Read the Radical Review =
" THE RADIANT ★ ಕಾಂತಿ "
will be Released on 14 th November 1964
The only monthly Anglo-Kannada Review
You will have everything for pleasure
The Radiant Publications MYSORE

Help The ' Gorakshana '
" ಗೋರಕ್ಷಣ " ಕ್ಕೆ ಸಹಾಯಮಾಡಿರಿ

ವುಡ್‌ಲ್ಯಾಂಡ್ಸ್ 30-10-64 ರಿಂದ
ಅಮೋಘ ಆರಂಭ
ಈಸ್ಟ್‌ಮನ್ ಕಲರ್ ಚಿತ್ರ [ದಿನವಹಿ 3 ಪ್ರದರ್ಶನಗಳು]
ಷಹನಾಯ್ (ಹಿಂದಿ) Shehnai
ನಟವರ್ಗ — ಬಿಶ್ವಜಿತ್, ರಾಜಶ್ರೀ, ಜಾನಿವಾಕರ್, ನಿರೂಪರಾಯ್
ಬಹು ಸೊಗಸಾದ ಉತ್ತಮ ಮನರಂಜಕ ಕಲಾಕೃತಿ

ಅಪೆರಾ 30-10-64 ರಿಂದ
ಸುಂದರ ತೆಲುಗು ಚಿತ್ರ [ದಿನ 3 ಆಟಗಳು]
ಮೈರಾವಣ
ಪಾತ್ರ— ಕೃಷ್ಣಕುಮಾರಿ, ಶಾಂತಾರಾವ್, ರಾಜನಾಲಾ, ರೇಲಂಗಿ

ರಣಜಿತ್‌ನಲ್ಲಿ ಯಶಸ್ವಿ 4 ನೇ ವಾರ
— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —
ಸಕಲರೂ ನೋಡಿ ಆನಂದಿಸಬೇಕಾದ ಅಭ್ಯುನೋಘ ಕಲಾಕೃತಿ
ಮುರಿಯದ ಮನೆ [ಕನ್ನಡ]
ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು
ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು
ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.
4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ರದ್ದು ಮಾಡಿದೆ
ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI
SUDHA
Superb Tonic

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 7